ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

SJ
ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 25॥ UDP/1263/2018-20 || R.NO.50495/91 ॥ ತಾರೀಕು : 23–07–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಮಳೆಯ ಅಬ್ಬರ : ಕೃಷಿ ಚಟುವಟಿಕೆ ನಿರಂತರ



ಕಳೆದ ಒಂದು ವಾರದಿಂದ ನಿರಂತರವಾಗಿ ಮಳೆ ಬೀಳುತ್ತಿರುವುದರಿಂದ ಜನಜೀವನದಲ್ಲಿ ಸ್ವಲ್ಪ ಏರುಪೇರು ಆದರೂ ತಂಪಾದ ವಾತಾವರಣದಲ್ಲಿ ಕೃಷಿ ಚಟುವಟಿಕೆಗಳು ವೇಗವಾಗಿ ನಡೆಯುತ್ತಿವೆ. ಬಹುತೇಕ ಗದ್ದೆಗಳಲ್ಲಿ ಭತ್ತದ ಕೃಷಿಯ ನಾಟಿಯಾಗಿ ಹಸಿರು ಎದ್ದು ಕಾಣುತ್ತಿದ್ದೆ.

ಜೂನ್ ತಿಂಗಳಲ್ಲಿ ಮಳೆ ಇಲ್ಲದೇ ಭತ್ತದ ಸಸಿ ಅಗೆ ತಯಾರಿ ಮಾಡಿ ಕುಳಿತ ಕೃಷಿಕರು ಗದ್ದೆಯಲ್ಲಿ ನೀರಿಲ್ಲದೇ ಕಂಗಾಲಾಗಿದ್ದರು. ಅಲ್ಪಸ್ವಲ್ಪ ಮಳೆ ಬರುತ್ತಿರುವಾಗ ಅದನ್ನು ಬಳಸಲು ಪ್ರಯತ್ನಿಸುತ್ತಿದ್ದರು. ಆದರೆ ಜುಲೈ ತಿಂಗಳಲ್ಲಿ ಕೆಲವು ದಿನಗಳ ಮಳೆ ಕೃಷಿಕರಿಗೆ ನಿಟ್ಟುಸಿರು ಬಿಡಲು ಕಾರಣವಾಯಿತು. ಬಿಟ್ಟು ಬಿಟ್ಟು ಬರುತ್ತಿದ್ದ ಮಳೆ ಕಳೆದೊಂದು ವಾರದಿಂದ ಸತತವಾಗಿ ಬರುತ್ತಿದ್ದು ಮಳೆಗಾಲದ ವಾತಾವರಣ ಮರುಕಳಿಸಿದಂತಾಗಿದೆ. ಕೆರೆ, ಬಾವಿಗಳಲ್ಲಿ ನೀರು ತುಂಬಿವೆ.

ಗಾಳಿಯ ತೀವ್ರತೆ ಕಡಿಮೆಯಾದುದರಿಂದ ಹೆಚ್ಚಿನ ಹಾನಿ ಸಂಭವಿಸಿಲ್ಲ. ಕರಾವಳಿಯಲ್ಲಿ ಕಡಲ ಕೊರೆತ ಕಂಡುಬಂದಿದ್ದು ಸಮುದ್ರದಲ್ಲಿ ಉಬ್ಬರವಿರುವುದರಿಂದ ನಾಡದೋಣಿ ಮೀನುಗಾರರಿಗೂ ಜಿಲ್ಲಾಡಳಿತ ಎಚ್ಚರಿಕೆ ಹೇಳಿದೆ.

## ಭತ್ತ ನಾಟಿ ಪ್ರಾತ್ಯಕ್ಷಿಕೆ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ (ರಿ) ಕುಂದಾಪುರ ತಾಲ್ಲೂಕು ಹಾಲಾಡಿ ವಲಯ ಹೈಕಾಡಿ ಕಾರ್ಯಕ್ಷೇತ್ರದಲ್ಲಿ ಶ್ರೀ ಪದ್ಧತಿ ಭತ್ತನಾಟಿ ಪ್ರಾತ್ಯಕ್ಷಿಕೆ ನಡೆಸಲಾಯಿತು.

ಹೈಕಾಡಿಯ ಭವಾಣಿಯ ಶಾರದಾರವರ ಜಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷರಾದ ಜ್ಯೋತಿ ಅಧ್ಯಕ್ಷತೆ ವಹಿಸಿದ್ದರು.

ಪ್ರಗತಿಪರ ಕೃಷಿ ತಜ್ಞರಾದ ಪ್ರಕಾಶಗೋವಿಂದೆ ಮಾಹಿತಿ ನೀಡಿ ಬೀಜಗಳನ್ನು ವಿವಿಧ ರೋಗಗಳಿಂದ ಮುಕ್ತಗೊಳಿಸಿ ಮೊಳಕೆ ಬರಿಸುವ ವಿಧಾನ ತೋರಿಸಿದರು. ಉತ್ತಮ ಇಳುವರಿ ಪಡೆಯಲು ಮಾಡಬೇಕಾದ ಹಂತಹಂತದ ಚಟುವಟಿಕೆ ವಿವರಿಸಿದರು. ಕಡಿಮೆ ಖರ್ಚಿನಲ್ಲಿ ಉತ್ತಮ ಉತ್ಪತ್ತಿ ಪಡೆಯುವ ಗುರಿಸಾಧನೆಯ ಹೆಜ್ಜೆಗಳನ್ನು ಪ್ರದರ್ಶಿಸಿದರು.

ವಲಯ ಮೇಲ್ವಿಚಾರಕಿ ಮಾಲತಿ ಪಿ.ನಾಯಕ್, ಹಿರಿಯ ಕೃಷಿಕರಾದ ಕರಿಯ ಮೊಗವೀರ , ಒಕ್ಕೂಟದ ಪದಾಧಿಕಾರಿಗಳಾದ ಸುಲೋಚನ , ಜ್ಯೋತಿ ಉಪಸ್ಥಿತರಿದ್ದರು. ಸೇವಾ ಪ್ರತಿನಿಧಿ ಅಮೃತಾ ನಿರೂಪಿಸಿದರು.

ಪಾಲ್ಗೊಂಡಿದ್ದ ರೈತರಿಗೆ ನಾಟಿ ಪ್ರಾತ್ಯಕ್ಷಿಕೆ ನಡೆಸಲಾಯಿತು.

## ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸದಸ್ಯರಾಗಿ ಕೃಷ್ಣಾನಂದ ಚಾತ್ರ



ಬ್ರಾಹ್ಮಣ ಸಮುದಾಯದಲ್ಲಿನ ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಗಾಗಿ ಕರ್ನಾಟಕ ಬ್ರಾಹ್ಮಣರ ಅಭಿವೃದ್ಧಿ ಮಂಡಳಿ ಸ್ಥಾಪಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದ್ದು ಸಮಿತಿಯ ಸದಸ್ಯರಾಗಿ ಕುಂದಾಪುರದ ದುರ್ಗಾಂಬಾ ಮೋಟಾರ್ಸ್‌ನ ಎಸ್.ಕೃಷ್ಣಾನಂದ ಚಾತ್ರ ನೇಮಿಸಲ್ಪಟ್ಟಿದ್ದಾರೆ.

ಎಸ್.ಕೃಷ್ಣಾನಂದ ಚಾತ್ರ ಅವರು ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ.

ಸಮಿತಿಯ ಮೊದಲ ಅಧ್ಯಕ್ಷರಾಗಿ ಹಾಸನ ಜಿಲ್ಲೆ ಬೇಳೂರಿನ ಅನಂತ ಸುಬ್ಬರಾಯ ಅವರನ್ನು ನೇಮಿಸಲಾಗಿದೆ.

ಕೆ.ವೆಂಕಟ್ ನಾರಾಯಣ , ಎ.ಎಸ್.ಜಯಸಿಂಹ , ಆರ್.ಲಕ್ಷ್ಮೀಕಾಂತ್ ಬೆಂಗಳೂರಿನಿಂದ ಆಯ್ಕೆಯಾದವರು. ಎಲ್.ನಾಗರಾಜ ರಾವ್ ತುಮಕೂರು , ಕೃಷ್ಣ ಬಿ.ಕುಲಕರ್ಣಿ ಕಲುಬುರ್ಗಿ , ರಘುನಾಥ್ ಬಳ್ಳಾರಿ , ಮದನ್ ಕುಲಕರ್ಣಿ ಹುಬ್ಬಳ್ಳಿ, ಮುರುಳೀಧರ ಪ್ರಭು ಉತ್ತರಕನ್ನಡ, ಡಾ.ಸುಜಾತ ಮೈಸೂರು ಇತರ ಸದಸ್ಯರು

## ಅಭಿನಂದನೆಗಳು



**ಎಸ್.ಕೃಷ್ಣಾನಂದ ಚಾತ್ರ**
ದುರ್ಗಾಂಬಾ ಮೋಟರ್ಸ್
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ,
ಶ್ರೀ ಕುಂದೇಶ್ವರ ದೇವಸ್ಥಾನ , ಕುಂದಾಪುರ

ಕರ್ನಾಟಕ ಸರಕಾರದ " ಕರ್ನಾಟಕ ಬ್ರಾಹ್ಮಣರ ಅಭಿವೃದ್ಧಿ ಮಂಡಳಿ"ಯ ಸದಸ್ಯರಾಗಿ ನೇಮಕಗೊಂಡ ನಿಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ ನಿಮ್ಮ ಅವಧಿಯಲ್ಲಿ ಉತ್ತಮ ಯೋಜನೆಗಳು ಸಾಕಾರಗೊಳ್ಳಲಿ ಎಂದು ಶುಭಹಾರೈಸುವ

* **ಎನ್. ರಾಘವೇಂದ್ರ ರಾವ್**
* **ವೆಂಕಟರಮಣ ಉಪಾಧ್ಯಾಯ**
* **ರಘುರಾಮರಾವ್**

**ಹೋಟೇಲ್ ಎನ್ ಆರ್ಸ್ ನಂದಿನಿ, ಕುಂದಾಪುರ**
**ಕೋಣಿ ಸದಾನಂದ ಉಡುಪರು,** ಸಮಾಜ ಸೇವಕರು

## ಪ್ರೊ. ನಾವಡರಿಗೆ ಉಡುಪ ಪ್ರಶಸ್ತಿ



ಕಿನ್ನಿಗೋಳಿ ಯುಗಪುರುಷ ಸಂಸ್ಥಾಪಕ ದಿ। ಕೋ.ಅ. ಉಡುಪ ಅವರ ಸಂಸ್ಮರಣಾರ್ಥ ನೀಡುವ ಕೋ.ಅ.ಉಡುಪ ಪ್ರಶಸ್ತಿಯನ್ನು ಈ ಬಾರಿ ಸಾಹಿತ್ಯ, ಶಿಕ್ಷಣ, ಜಾನಪದ ಕ್ಷೇತ್ರದಲ್ಲಿ ವಿಶಿಷ್ಟ ರೀತಿಯ ಸೇವೆ ಸಲ್ಲಿಸಿದ ಹಂಪಿ ವಿಶ್ವವಿದ್ಯಾನಿಯದ ಪ್ರಭಾರ ಕುಲ ಸಚಿವರಾಗಿದ್ದ ಪ್ರೊ. ಎ.ವಿ.ನಾವಡ ಅವರಿಗೆ ನೀಡಲಾಗುವುದು.

ಅವರು ತುಳುವ ದರ್ಶನ, ಸಿರಿಜಾತ್ರೆ, ಜಾನಪದ ಸಮಾಲೋಚನ, ದಾಸ ಮಾರ್ಗ, ಕನ್ನಡ ದೈವಾರಾಧನೆ, ಸಾಹಿತ್ಯ ಶೋಧ, ಜಾನಪದ ಶೋಧ ಮುಂತಾದ ಇನ್ನೂ ಹಲವು ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. ದಾಸ ಸಾಹಿತ್ಯ, ಮಕ್ಕಳ ಸಾಹಿತ್ಯ... ತುಳು ಸಾಹಿತ್ಯ , ಜಾನಪದ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಹಾಗೂ ವಿಚಾರ ಸಂಕಿರಣಗಳಲ್ಲಿ ಪ್ರಬಂಧವನ್ನು ಮಂಡಿಸಿದ್ದಾರೆ.

ಜುಲೈ 24 ರಂದು ಕಿನ್ನಿಗೋಳಿ ಯುಗಪುರುಷ ಸಭಾಭವನದಲ್ಲಿ ಜರಗಲಿರುವ ಕೊ.ಅ.ಉಡುಪ ಸಂಸ್ಕರಣ ಸಮಾರಂಭದಲ್ಲಿ ಕೊ.ಅ. ಉಡುಪ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಯುಗಪುರುಷ ಪ್ರಧಾನ ಸಂಪಾದಕ ಕೊಡೆತ್ತೂರು ಭುವನಾಭಿರಾಮ ಉಡುಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವ "ಕುಂದಾಪ್ರಕನ್ನಡ " ದಿನಾಚರಣೆ




ವಿಶ್ವ ಕುಂದಾಪ್ರ ಕನ್ನಡ ದಿನಾಚರಣೆ, ಆ.1ನೇ ತಾರೀಕಿಗೆ ಕರ್ಕಾಟಕ ಅಮಾಸಿ ದಿನ ಆಚರಣೆ ಮಾಡ್ಕ ಅಂತೇಳಿ ಹೊರ್ಟೀರ್, ವಾಟ್ಸ್‌ಅಪ್, ಫೇಸ್‌ಬುಕ್ ಅಂತ್ಹೇಳಿ ಗೌಜ್ ನಡೀತಾ ಇತ್. ದೊಡ್ಡೌವ್ರ, ಸಣ್ಣವ್ರ , ಹುಡ್ಗರ ಮಕ್ಳ ಎಲ್ಲ ಸೇರ್ಕಂಡೀರ್, ಕಾರ್ಯಕ್ರಮ ಹ್ಯಾಂಗ್ ನಡ್ಸತ್ರ್ ಅಂತ ಗೊತ್ತಾಯ್ಲ, ಆರೆ, ಕುಂದಾಪ್ರ ಕನ್ನಡ ಭಾಷಿ ಪ್ರಚಾರ ಅಂತೂ ಆತ್. ಎಲ್ಲೂ ಸೇರ್ಕಣಿ ಮಾರಾಯ್ರೆ ಅಂತ ಕೇಂಡ್ಕಂಡೀರ್.

